ಮಾಡುತ್ತಾರೆಂದು ಒಳ್ಳೆಯ ಹೆಸರೂ ಗಳಿಸಿದ್ದರು. ತಾವಾಯಿತು, ತಮ್ಮ ಕೆಲಸವಾಯಿತು ಎಂದು ಬದುಕು ನಡೆಸಿದ್ದರು. ಕೆಲಸಕ್ಕೆ ಸೇರಿ ಸರಿಯಾಗಿ ಎರಡು ವರ್ಷಗಳೂ ಆಗಿರಲಿಲ್ಲ. ಮನೆಯಲ್ಲಿ ಅವರ ಮದುವೆಯ ಬಗ್ಗೆ ಮಾತುಕತೆ ಆರಂಭವಾಗಿತ್ತು.

ಬೇಸಗೆಯ ರಜೆ ಮುಗಿದು ಕಾಲೇಜು ಪುನರಾರಂಭ. ಹೊಸ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪ್ರವೇಶ ಪ್ರಕ್ರಿಯೆ ಇನ್ನೂ ನಡೆಯುತ್ತಿತ್ತು. ಆದರೆ ಈಗಾಗಲೇ ಮೊದಲ ವರ್ಷ ಮುಗಿಸಿ ಎರಡನೆಯ ವರ್ಷಕ್ಕೆ ಕಾಲಿಟ್ಟ ವಿದ್ಯಾರ್ಥಿಗಳ ತರಗತಿಗಳು ಆರಂಭವಾಗಿದ್ದುವು. ಹೊರಗಡೆ ಆಷಾಢದ ಮಳೆ ನಿರಂತರವಾಗಿ ಸುರಿಯುತ್ತಿದ್ದುದರಿಂದ ಎಲ್ಲ ಒದ್ದೆಮುದ್ದೆ.

ಅದು 1969ನೆಯ ಇಸವಿ ಜುಲೈ ತಿಂಗಳ 21, ಸೋಮವಾರ. ಬೆಳಗಿನ ಒಂಬತ್ತು ಗಂಟೆ. ಸ್ಟಾಫ್ ರೂಮಿನಲ್ಲಿ ಕುಳಿತ ರಾವ್ ಅವರ ಮುಖ ಬಿಳಿಚಿಕೊಂಡಿತ್ತು. ಅವರ ಸಹೋದ್ಯೋಗಿಗಳು ಏನು ಎಂದು ವಿಚಾರಿಸಿದರು. ರಾವ್ ಅವರು ಗದ್ಗದ ಕಂಠದಿಂದ "ಶೇಕ್ಸ್‌ಪಿಯರ್, ವರ್ಡ್ಸ್‌ವರ್ಥ್ ನಿಂದ ಹಿಡಿದು ನಮ್ಮ ಕಾಳಿದಾಸ, ಭವಭೂತಿಯ ತನಕ ಇಲ್ಲಿಯ ವರೆಗೆ ಎಲ್ಲ ಕವಿಗಳೂ ಒಂದೋ ಸುಳ್ಳು ಹೇಳಿದ್ದಾರೆ ಇಲ್ಲವೇ ನಿನ್ನೆ ರಾತ್ರಿ ನಡೆದದ್ದು ಸುಳ್ಳೇ ಆಗಿರಬೇಕು" ಎಂದರು.

"ಏನಾಯಿತು?" ಎಂದು ಕೇಳಿದರು ಸಹೋದ್ಯೋಗಿಗಳು.

"ಪತ್ರಿಕೆ ನೋಡಿ" ಎಂದು ರಾವ್ ಅವರು ಅದೇ ಸ್ವರದಲ್ಲಿ ಹೇಳಿ ಮುಖಮುಚ್ಚಿಕೊಂಡರು.

ಎಲ್ಲ ಪತ್ರಿಕೆಗಳಲ್ಲೂ ಒಂದೇ ಹೆಡ್ ಲೈನ್ –'ಚಂದ್ರನ ಮೇಲೆ ಮೊದಲ ಪದಾರ್ಪಣ' ಎಂದು. ಅಮೆರಿಕಾ ದೇಶದಿಂದ ಐದು ದಿನಗಳ ಹಿಂದೆ ಒಗೆದ ಮೂರು ಜನರಿದ್ದ ಒಂದು ರಾಕೆಟ್ ಚಂದ್ರನ ಕಕ್ಷೆ ಪ್ರವೇಶಿಸಿ ನೀಲ್ ಆರ್ಮ್‌ಸ್ಟ್ರಾಂಗ್ ಎಂಬ ಒಬ್ಬಾತ ಚಂದ್ರನ ಮೇಲೆ ಕಾಲಿಟ್ಟು ಸುಮಾರು ಮೂರು ಗಂಟೆಗಳ ಕಾಲ ಅಲ್ಲಿ ಓಡಾಡಿದ್ದ!

ಹ್ಯೂಮಾನಿಟೀಸ್ ಮೇಲೆ ಇದು ವಿಜ್ಞಾನದ ವಿಜಯ ಎಂದು ಯಾರು ಏನೇ ಸಮಾಧಾನ ಮಾಡಿದರೂ ರಾವ್ ಅವರ ದುಃಖ ಕಮ್ಮಿಯಾಗಲಿಲ್ಲ. ಇಷ್ಟು ದಿನ ಚಂದ್ರನನ್ನು ಹಾಡಿ ಹೊಗಳಿದ, ಅವನ ಬಗ್ಗೆ ಲೆಕ್ಕವಿಲ್ಲದಷ್ಟು ಕತೆ ಕವನಗಳನ್ನು ಹೊಸೆದ, ತಮ್ಮ ಮಕ್ಕಳಿಗೆ, ಪ್ರೇಮಿಗಳಿಗೆ ಅವನ ಹೆಸರಿಟ್ಟು ಹೋಲಿಸಿದ ಎಲ್ಲ ಬರಹಗಾರರರೂ ಹೇಳಿದ್ದು ಸುಳ್ಳೇ ಆಯಿತಲ್ಲ ಮತ್ತು ತಾವು ಬದುಕಿನುದ್ದಕ್ಕೂ ಸತ್ಯವೆಂದೇ ನಂಬಿದ ವಿಚಾರ ಬುಡಮೇಲಾದದ್ದು ಅವರ ಎದೆಗೆ ಯಾರೋ ಒದ್ದ ಹಾಗಾಗಿತ್ತು. ಮುಚ್ಚಿದ ಕೈಗಳ ಹಿಂದೆ ಕಣ್ಣೀರು ಧಾರೆಧಾರೆಯಾಗಿ ಸುರಿಯತೊಡಗಿತ್ತು.

ಮಧ್ಯಾಹ್ನ ಹನ್ನೆರಡು ಗಂಟೆಗೆ ಸರಿಯಾಗಿ ಅವರು ತಮ್ಮ ಕುರ್ಚಿಯಿಂದ ಎದ್ದು, ಹೊರಗೆ ಧೋ ಎಂದು ಸುರಿಯುತ್ತಿರುವ ಮಳೆಯಲ್ಲಿ, ಕಾಲೇಜಿನ ಪ್ರಾಂಗಣದ ಮಧ್ಯೆ ಬಂದು ಆಕಾಶ ನೋಡುತ್ತಾ ಒಮ್ಮೆಲೇ ವಿಚಿತ್ರವಾಗಿ ಕುಣಿಯಲಾರಂಭಿಸಿದರು.

ಹುಚ್ಚು ಹಿಡಿದಿದೆಯೆಂದು ಕೆಲಸದಿಂದ ತೆಗೆದು ಹಾಕಿದ ಅವರನ್ನು ಹೇಗೋ ಏನೋ ಮನೆಗೆ ಕರೆದುಕೊಂಡು ಬಂದರು. ಅಂದಿನಿಂದ ಅವರು ಹೀಗೆಯೇ ಇದ್ದಾರೆ.

ನಾನು ನೋಡುವಾಗ ಅವರಿಗೆ ಎಂಬತ್ತರ ವಯಸ್ಸು ದಾಟಿತ್ತು.

ಕತೆಗಾರ, ಕಾದಂಬರಿಕಾರ ಹಾಗೂ ಅನುವಾದಕ ಪೈ ಕಾಸರಗೋಡಿನ ಪೆರ್ಲದವರು. 'ತಿರುವು', 'ಈ ಬೆರಳ ಗುರುತು', 'ಹಾರುವ ಹಕ್ಕಿಯ ಗೂಡಿನ ದಾರಿ' ಅವರ ಕಥಾಸಂಕಲನಗಳಾಗಿವೆ. 'ಸ್ವಪ್ನ ಸಾರಸ್ವತ' ಅವರ ಕಾದಂಬರಿ. 'ಆಧುನಿಕ ಚೀನಿ ಸಣ್ಣಕತೆಗಳು', 'ಚೆಕೋವನ ಕೊನೆಯ ದಿನಗಳು', 'ಮೋ ಯಾನ್‌ನ ಕಥೆಗಳು', 'ಮಹಾತ್ಮನಿಗಾಗಿ ಕಾಯುತ್ತ' ಅವರ ಅನುವಾದಿತ ಪುಸ್ತಕಗಳಾಗಿವೆ